# ಗೊತ್ತಾಗದಂತೆ ವಾಟ್ಸ್ಆ್ಯಪ್ ಸ್ಟೇಟಸ್ ನೋಡಿ

**ಒಬ್ಬರ ಸ್ಟೇಟಸ್ ಅನ್ನು ಅವರಿಗೆ ಗೊತ್ತಾಗದಂತೆ ನೋಡುವ ಆಯ್ಕೆಯನ್ನು ವಾಟ್ಸ್ಆ್ಯಪ್ ಈಗ ಒದಗಿಸಿದೆ. ಮತ್ತಷ್ಟು ಹೊಸ ಫೀಚರ್ಸ್‌ಗಳನ್ನು ಪರಿಚಯಿಸುವುದರೊಂದಿಗೆ ವಾಟ್ಸ್ಆ್ಯಪ್ ಈಗ ಬಳಕೆದಾರರಿಗೆ ಮತ್ತೂ ಹತ್ತಿರವಾಗುವ ಪ್ರಯತ್ನದಲ್ಲಿದೆ.**

■ **ಶಶಿಕುಮಾರ್ ಸಿ.**




ವಾಟ್ಸ್ಆ್ಯಪ್ ಸ್ಟೇಟಸ್ ವೀಕ್ಷಣೆಯ ಹವ್ಯಾಸ ಬಹುತೇಕರಿಗೆ ಚಟವಾಗಿಬಿಟ್ಟಿದೆ. ಮೊದಲೆಲ್ಲ, ವಾಟ್ಸ್ಆ್ಯಪ್ ಮೆಸೇಜ್ ಮಾಡಲೆಂದು ಫೋನ್ ಕೈಗೆತ್ತಿಕೊಳ್ಳುತ್ತಿದ್ದವರು ಈಗ ಯಾರು ಯಾವ ಸ್ಟೇಟಸ್ ಹಾಕಿದ್ದಾರೆ ಅನ್ನೋದನ್ನು ತಿಳಿಯುವುದಕ್ಕೆ ಫೋನ್‌ನತ್ತ ಕಣ್ಣಾಯಿಸುತ್ತಿದ್ದಾರೆ.

ವಿಚಿತ್ರ ಮೋಡಿ ಮಾಡಿರುವ ವಾಟ್ಸ್ಆ್ಯಪ್ ಸ್ಟೇಟಸ್ ವೀಕ್ಷಣೆಯಲ್ಲಿ, ಯಾರೆಲ್ಲ ತಮ್ಮ ಸ್ಟೇಟಸ್ ನೋಡಿದ್ದಾರೆ ಎಂದು ತಿಳಿದು ಸಂಭ್ರಮಿಸುವ ಮನೋಭಾವದವರೂ ಇದ್ದಾರೆ. ಬೇರೆಯವರ ಸ್ಟೇಟಸ್ ಅನ್ನು ಅವರಿಗೆ ಗೊತ್ತಿಲ್ಲದಂತೆಯೇ ನೋಡುವ ಕುತೂಹಲವೂ ಕೆಲವರಿಗಿದೆ. ಈ ಕುತೂಹಲಕ್ಕೆ ವಾಟ್ಸ್ಆ್ಯಪ್ ಅನುವು ಮಾಡಿಕೊಟ್ಟಿದ್ದು, ಮತ್ತೊಬ್ಬರ ಸ್ಟೇಟಸ್ ಅನ್ನು ಅವರಿಗೆ ಗೊತ್ತಾಗದಂತೆ ನೋಡುವ ಆಯ್ಕೆಯನ್ನು ಒದಗಿಸಿದೆ.

ನೀವು ನಿಮ್ಮ ಸ್ನೇಹಿತರ ವಾಟ್ಸ್ಆ್ಯಪ್ ಸ್ಟೇಟಸ್ ಅನ್ನು ನೋಡಿಯೂ ಅವರ ವ್ಯೂವ್ ಲಿಸ್ಟ್‌ನಲ್ಲಿ ನಿಮ್ಮ ಹೆಸರು ಕಾಣಿಸಿಕೊಳ್ಳದಂತೆ ಮಾಡಲು 'ರೀಡ್ ರೆಸಿಪ್ಟ್' ಎಂಬ ಆಯ್ಕೆಯನ್ನು ವಾಟ್ಸ್ಆ್ಯಪ್ ಒದಗಿಸಿದ್ದು, ಇದನ್ನು ಆಫ್ ಮಾಡಿದರೆ ಯಾರದ್ದೇ ಸ್ಟೇಟಸ್ ಅನ್ನು ನೋಡಿದಾಗ್ಯೂ ಕೂಡ ಅವರ ವ್ಯೂವ್ ಲಿಸ್ಟ್‌ನಲ್ಲಿ ನಿಮ್ಮ ಹೆಸರು ಕಾಣದು.

### ರೀಡ್ ರೆಸಿಪ್ಟ್ ಸೆಟ್ ಮಾಡೋದು?

ಗೂಗಲ್ ಪ್ಲೇಸ್ಟೋರ್‌ನಲ್ಲಿ ವಾಟ್ಸ್ಆ್ಯಪ್ ಅನ್ನು ಮೊದಲು ಅಪ್‌ಡೇಟ್ ಮಾಡಿಕೊಳ್ಳಿ. ನಂತರ ಆ್ಯಪ್ ಅನ್ನು ತೆರೆದು ಸೆಟ್ಟಿಂಗ್ಸ್ ಆಯ್ಕೆಗೆ ಭೇಟಿ ನೀಡಿ. ಅಲ್ಲಿ ಕಾಣುವ 'ಗೌಪ್ಯತೆ' ಕ್ಲಿಕ್ ಮಾಡಿ ಮತ್ತು ರೀಡ್ ರೆಸಿಪ್ಟ್ ಆಯ್ಕೆಯನ್ನು ಆಫ್ ಮಾಡಿ. ಈಗ ನೀವು ಬೇರೊಬ್ಬರ ವಾಟ್ಸ್ಆ್ಯಪ್ ಸ್ಟೇಟಸ್ ಅನ್ನು ಪರಿಶೀಲಿಸಿದರೂ ಅವರ ವ್ಯೂವ್ ಲಿಸ್ಟ್‌ನಲ್ಲಿ ನಿಮ್ಮ ಹೆಸರು ಕಾಣದು. ನಿಮ್ಮ ಸಂದೇಶಗಳಿಂದ ಡಬಲ್ ಬ್ಲೂ ಟಿಕ್ ಅನ್ನು ತೆಗೆದುಹಾಕುವ ರೀಡ್ ರೆಸಿಪ್ಟ್‌ಗಳನ್ನು ಆಫ್ ಮಾಡುವಂತೆಯೇ, ಇದು ನಿಮ್ಮ ಎಲ್ಲಾ ಚಾಟ್‌ಗಳಿಗೂ ಕಣ್ಮರೆಯಾಗುತ್ತದೆ ಮತ್ತು ಇತರರು ನಿಮ್ಮ ಸಂದೇಶಗಳನ್ನು ಓದಿದ್ದಾರೆಯೇ ಇಲ್ಲವೇ ಅನ್ನುವುದು ಸಹ ಈಗ ನಿಮಗೆ ತಿಳಿಯುವುದಿಲ್ಲ. ರೀಡ್ ರೆಸಿಪ್ಟ್ ಅನ್ನು ಆಫ್ ಮಾಡಿದರೆ, ಯಾರೆಲ್ಲ ನಿಮ್ಮ ಸ್ಟೇಟಸ್ ಅಪ್‌ಡೇಟ್ ಅನ್ನು ನೋಡಿದ್ದಾರೆ ಎಂಬುದನ್ನು ತಿಳಿಯಲು ನಿಮಗೂ ಸಾಧ್ಯವಾಗದು. ■

### ವಾಟ್ಸ್ಆ್ಯಪ್‌ನಲ್ಲಿ ಹೊಸ ಫೀಚರ್ಸ್!

ಇನ್‌ಸ್ಟಂಟ್ ಮೆಸೇಜಿಂಗ್ ಆ್ಯಪ್ ಆದ ವಾಟ್ಸ್ಆ್ಯಪ್ ತನ್ನ ಗ್ರಾಹಕರಿಗೆ ಸ್ಟಿಕರ್ ಸರ್ಚ್, ಕಸ್ಟಮ್ ವಾಲ್‌ಪೇಪರ್, ಡೂಡಲ್ ವಾಲ್‌ಪೇಪರ್ ಕಸ್ಟಮ್ ಡಾರ್ಕ್ ಮೋಡ್ ಹಾಗೂ ಕಸ್ಟಮ್ ಲೈಟ್ ಮೋಡ್ ವಾಲ್‌ಪೇಪರ್ ಎಂಬ ಹೊಸ ಫೀಚರ್‌ಗಳನ್ನು ಪರಿಚಯಿಸಿದೆ.

ಈ ಫೀಚರ್‌ಗಳನ್ನು ಗ್ರಾಹಕರು ಬಳಸುವ ಮೊದಲು ತಮ್ಮ ವಾಟ್ಸ್ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ಗೆ ಹೋಗಿ ಅಪ್‌ಡೇಟ್ ಮಾಡಿಕೊಳ್ಳಬೇಕು. ನಂತರವಷ್ಟೇ ಇವು ಲಭ್ಯವಾಗುತ್ತವೆ. ಈ ಫೀಚರ್‌ಗಳಿಂದ ಬಳಕೆದಾರರಿಗೆ ಹೊಸ ಅನುಭವ ಸಿಗಲಿದ್ದು, ಮೆಸೇಜಿಂಗ್ ವಿಧಾನವನ್ನು ಇನ್ನಷ್ಟು ವರ್ಣರಂಜಿತಗೊಳಿಸಬಹುದಾಗಿದೆ.

ಈ ಮುಂಚೆ ಡಾರ್ಕ್ ಮತ್ತು ಲೈಟ್ ಮೋಡ್ ಎಂಬ ಆಯ್ಕೆಗಳನ್ನಷ್ಟೇ ವಾಟ್ಸ್ಆ್ಯಪ್ ಒದಗಿಸಿತ್ತು. ಅದರ ಮುಂದುವರೆದ ಭಾಗವಾಗಿ ಕಸ್ಟಮ್ ಡಾರ್ಕ್ ಮತ್ತು ಲೈಟ್ ಮೋಡ್ ವಾಲ್‌ಪೇಪರ್ ಆಯ್ಕೆಗಳನ್ನು ಒದಗಿಸಲಾಗಿದೆ. ಇದರಲ್ಲಿ ತಮಗಿಷ್ಟ ಬಂದ ರೀತಿಯ ವಾಲ್‌ಪೇಪರ್ ಅನ್ನು ಸೆಟ್ ಮಾಡಿಕೊಳ್ಳಬಹುದು. ಜತೆಗೆ ವೈಯಕ್ತಿಕ ಮತ್ತು ಗ್ರೂಪ್ ಚಾಟ್‌ಗೂ ನಮ್ಮ ಆಯ್ಕೆಯ ಬ್ಯಾಕ್‌ಗ್ರೌಂಡ್ ಫೋಟೊ ಬಳಸಿಕೊಳ್ಳಬಹುದಾಗಿದೆ.




ಸ್ಟಿಕರ್ ಸರ್ಚ್ ಆಯ್ಕೆಯಡಿ ವಾಟ್ಸ್ಆ್ಯಪ್ ವಿವಿಧ ವಿನ್ಯಾಸದ ಹೊಸ ಬಗೆಯ ಸ್ಟಿಕರ್‌ಗಳನ್ನು ಪರಿಚಯಿಸಿದೆ. ಈ ಸ್ಟಿಕರ್‌ಗಳನ್ನು ಮೆಸೇಜ್ ನಡುವೆ ಬಳಸುವುದರಿಂದ ವಿನೂತನ ಅನುಭವ ಲಭ್ಯವಾಗಲಿದೆ. ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆಯ ಟುಗೆದರ್ ಆ್ಯಟ್ ಹೋಮ್ ಈಗ ಅನಿಮೇಶನ್ ಸ್ಟಿಕರ್ ರೂಪದಲ್ಲಿ ಲಭ್ಯ. ■